ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2019–20 : ದಿನಾಂಕ : 14–01–2020

# ಪತ್ರಕರ್ತರ ಗಮನಕ್ಕೆ

ಫೆಬ್ರವರಿ 5, 6 ಮತ್ತು 7 ರಂದು ಕಲಬುರಗಿಯಲ್ಲಿ ಜರುಗಲಿರುವ 85 ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ವರದಿಗಾಗಿ ಮಾಧ್ಯಮ ಪ್ರತಿನಿಧಿಗಳಿಗೆ ಅಧಿಕೃತ ಪ್ರವೇಶ ಪತ್ರ ನೀಡಲಾಗುವುದು. ಈ ಸಮ್ಮೇಳನದಲ್ಲಿ ಭಾಗವಹಿಸಲಿಚ್ಚಿಸುವ ಮಾಧ್ಯಮ ಪ್ರತಿನಿಧಿಗಳು ಮಾನ್ಯತಾ ಪತ್ರ ಅಥವಾ ತಮ್ಮ ಸುದ್ದಿ ಸಂಸ್ಥೆಯ ಶಿಫಾರಸ್ಸು ಪತ್ರದೊಂದಿಗೆ ಗುರುತಿನ ಚೀಟಿಯ ನಕಲು ಪ್ರತಿ ಹಾಗೂ 3 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳನ್ನು ದಿನಾಂಕ 17–01–2020 ಸಂಜೆ 5–00 ಗಂಟೆಯೊಳಗಾಗಿ ಸುದ್ದಿ ಮತ್ತು ಪತ್ರಿಕಾ ಶಾಖೆಯ ಜಡಿಯಪ್ಪ ಗೆದ್ಲಗಟ್ಟಿ, ಸಹಾಯಕ ನಿರ್ದೇಶಕರು ಇವರಿಗೆ ಸಲ್ಲಿಸಲು ಕೋರಿದೆ.

## ಪತ್ರಿಕಾ ಆಮಂತ್ರಣ

1. ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳಿ ನಿಯಮಿತ (ಕೆಎಂಎಫ್) ಬೆಂಗಳೂರು ಇವರ ನೂತನ ಉತ್ಪನ್ನಗಳ ಬಿಡುಗಡೆ ಸಮಾರಂಭ

ಉದ್ಘಾಟನೆ ಹಾಗೂ ನಂದಿನಿ ನೂತನ ಉತ್ಪನ್ನಗಳ ಬಿಡುಗಡೆ:

ಬಿ.ಎಸ್. ಯಡಿಯೂರಪ್ಪ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಮುಖ್ಯ ಅತಿಥಿಗಳು:

ಬಸವರಾಜ ಬೊಮ್ಮಾಯಿ, ಗೃಹ ಮತ್ತು ಸಹಕಾರ ಸಚಿವರು.

ಪ್ರಭು ಬಿ. ಚವ್ಹಾಣ್,

ಪಶುಸಂಗೋಪನೆ, ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಸಚಿವರು.

<u>ಅಧ್ಯಕ್ಷತೆ:</u>
ಬಾಲಚಂದ್ರ ಲ. ಜಾರಕಿಹೊಳಿ,
ಅಧ್ಯಕ್ಷರು, ಕಹಾಮ ಹಾಗೂ ಶಾಸಕರು, ಅರಬಾವಿ ಮತಕ್ಷೇತ್ರ

ದಿನಾಂಕ: 16–01–2020, ಗುರುವಾರ, ಸಮಯ : ಅಪರಾಹ್ನ 12–00 ಗಂಟೆಗೆ

ಸ್ಥಳ: ಐ.ಟಿ.ಸಿ. ವಿಂಡ್ಸರ್ ಮ್ಯಾನರ್ ಹೋಟೆಲ್, ಗಾಲ್ಫ್ ಕೋರ್ಸ್ ರಸ್ತೆ, ಬೆಂಗಳೂರು.

## ಪತ್ರಿಕಾ ಪ್ರಕಟಣೆ

# ಜನವರಿ 16 ರಂದು
# ನಂದಿನಿ ನೂತನ ಉತ್ಪನ್ನಗಳ ಬಿಡುಗಡೆ ಸಮಾರಂಭ

ಬೆಂಗಳೂರು ಜನವರಿ 14 (ಕರ್ನಾಟಕ ವಾರ್ತೆ)

ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳಿ ನಿಯಮಿತ, ಬೆಂಗಳೂರು (ಕೆ.ಎಂ.ಎಫ್) ವತಿಯಿಂದ ಜನವರಿ 16 ರಂದು ಅಪರಾಹ್ನ 12.00 ಗಂಟೆಗೆ ನಗರದ ಐ.ಟಿ.ಸಿ. ವಿಂಡ್ಸರ್ ಮ್ಯಾನರ್ ಹೋಟೆಲ್, ಗಾಲ್ಫ್ ಕೋರ್ಸ್ ರಸ್ತೆ, ಬೆಂಗಳೂರು ಇಲ್ಲಿ ನಂದಿನಿ ನೂತನ ಉತ್ಪನ್ನಗಳ ಬಿಡುಗಡೆ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಈ ಸಮಾರಂಭದ ಉದ್ಘಾಟನೆಯನ್ನು ನೆರವೇರಿಸಿ ಇದೇ ಸಂದರ್ಭದಲ್ಲಿ ನಂದಿನಿ (ಕೆ.ಎಂ.ಎಫ್) ನೂತನ ಉತ್ಪನ್ನಗಳಾದ ನಂದಿನಿ ಚೀಸ್ – ಪ್ರೋಸಸ್ಡ್, ಮೊಜ್ಜರೆಲ್ಲಾ, ಸ್ಲೈಸ್, ಸ್ಪ್ರೆಡ್ಸ್, ನಂದಿನಿ ದೇಸಿ ಹಾಲು, ನಂದಿನಿ ಕ್ರೀಮ್ ಸೇರಿದಂತೆ ಈ ಸಂದರ್ಭದಲ್ಲಿ 125 ಮಿಲಿ ಮತ್ತು 750 ಮಿಲಿ ಪ್ರಮಾಣದಲ್ಲಿ ಹಣ್ಣುಗಳ ನ್ಯಾಚುರಲ್ ಐಸ್‌ಕ್ರೀಂಗಳಾದ ಹಲಸಿನ ಹಣ್ಣು, ಸ್ಟ್ರಾಬರಿ, ಮಾವಿನ ಹಣ್ಣು, ಸೀತಾಫಲ, ಸೀಬೆ ಹಣ್ಣು, ಲಿಚಿ ಹಣ್ಣು, ಸಪೋಟ ಹಾಗೂ ಎಳನೀರು. ವೆನಿಲ್ಲಾ ಐಸ್‌ಕ್ರೀಂ ಕೇಕ್, 10 ಗ್ರಾಂ ಪ್ರಮಾಣದಲ್ಲಿ ವಿವಿಧ ಸ್ವಾದದ ಗ್ರೀಕ್‌ಯೋಗರ್ಟ್‌ಗಳು ಮಾವಿನ ಹಣ್ಣು, ಹನಿ ಬನಾನ ಹಾಗೂ ಬ್ಲೂಬೆರ್‍ರಿ ಮತ್ತು ಹಾಲಿನ ರಸ್ಕ್ ಉತ್ಪನ್ನಗಳನ್ನು ಬಿಡುಗಡೆ ಮಾಡಲಿದ್ದಾರೆ.

ಗೃಹ ಮತ್ತು ಸಹಕಾರ ಸಚಿವ ಬಸವರಾಜ ಬೊಮ್ಮಾಯಿ, ಪಶುಸಂಗೋಪನೆ, ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಸಚಿವ ಪ್ರಭು ಬಿ. ಚವ್ಹಾಣ್ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ಕರ್ನಾಟಕ ಹಾಲು ಉತ್ಪಾದಕರ ಮಹಾಮಂಡಳಿ ಅಧ್ಯಕ್ಷರೂ ಹಾಗೂ ಅರಬಾವಿ ಕ್ಷೇತ್ರದ ಶಾಸಕರೂ ಆದ ಬಾಲಚಂದ್ರ ಬಿ. ಜಾರಕಿಹೊಳಿ ಅವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ.

ರಾಜ್ಯದ ವಿವಿಧ ಹಾಲು ಉತ್ಪಾದಕರ ಮಂಡಳಿ ಅಧ್ಯಕ್ಷರು, ಸದಸ್ಯರು ಸೇರಿದಂತೆ ಅನೇಕ ಗಣ್ಯರು ಸಮಾರಂಭದಲ್ಲಿ ಉಪಸ್ಥಿತರಿರುವರು.

## ಜನವರಿ 27 ರಂದು ಲೋಕ ಅದಾಲತ್

ಬೆಂಗಳೂರು ಜನವರಿ 14 (ಕರ್ನಾಟಕ ವಾರ್ತೆ)

ಭಾರತೀಯ ಅಂಚೆ ಇಲಾಖೆಯವತಿಯಿಂದ ಬೆಂಗಳೂರು ನಗರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆ ವ್ಯಾಪ್ತಿಗೆ ಸಂಬಂಧಪಟ್ಟ ಅಂಚೆ ಸೇವೆಗಳ ಕುಂದು ಕೊರತೆಗಳು ಅಹವಾಲುಗಳನ್ನು ಪರಿಹರಿಸಲು ನೆಲಮಂಗಲ ಅಂಚೆ ಕಚೇರಿಯಲ್ಲಿ (ಕೆ.ಎಸ್.ಆರ್.ಟಿ.ಸಿ. ಬಸ್‌ಸ್ಟ್ಯಾಂಡ್ ಹತ್ತಿರ) ಅಂಚೆ ಅದಾಲತ್ (ಡಾಕ್ ಅದಾಲತ್) ನ್ನು ಜನವರಿ 27 ರಂದು ಮಧ್ಯಾಹ್ನ 3.00 ಗಂಟೆಗೆ ಆಯೋಜಿಸಲಾಗಿದೆ.

ಸಾರ್ವಜನಿಕರು ಅಂಚೆ ಸೇವೆಗಳ ಬಗ್ಗೆ ತಮಗಿರುವ ಕುಂದುಕೊರತೆಗಳನ್ನು ತಮ್ಮ ಸಂಪೂರ್ಣ ಹಾಗೂ ಸಂಪರ್ಕ ವಿಳಾಸದೊಂದಿಗೆ ತ್ವರಿತ ಪರಿಹಾರಕ್ಕಾಗಿ ಸಹಾಯಕ ನಿರ್ದೇಶಕರು, ಪೋಸ್ಟ್ ಮಾಸ್ಟರ್ ಜನರಲ್ ಕಾರ್ಯಾಲಯ ನಂ. 1, ಅರಮನೆ ರಸ್ತೆ, ಬೆಂಗಳೂರು – 560 00 ಈ ವಿಳಾಸಕ್ಕೆ ಜನವರಿ 22 ರೊಳಗಾಗಿ ತಲುಪುವಂತೆ ಕಳುಹಿಸಿಕೊಡಬಹುದಾಗಿದೆ.

ಸಾರ್ವಜನಿಕರು ತಮ್ಮ ಕುಂದುಕೊರತೆಗಳನ್ನು ಇ-ಮೇಲ್ ಮುಖಾಂತರವು ಸಹ ಕಳುಹಿಸಬಹುದಾಗಿದೆ. ಸಮಸ್ಯೆಗಳನ್ನು ಸಂಕ್ಷಿಪ್ತವಾಗಿ ನಿರ್ದಿಷ್ಟ ಅಂಕಿ ಅಂಶಗಳೊಂದಿಗೆ ಕಳುಹಿಸುವಂತೆ ಪತ್ರಿಕಾ ಪ್ರಕಟಣೆ ತಿಳಿಸಿದೆ.

# ಅಲ್ಪಾವಧಿ ಕೌಶಲ್ಯ ತರಬೇತಿಗಾಗಿ ಅರ್ಜಿ ಆಹ್ವಾನ

**ಬೆಂಗಳೂರು ಜನವರಿ 14 (ಕರ್ನಾಟಕ ವಾರ್ತೆ)**

ಸರ್ಕಾರಿ ಮಾದರಿ ಕೈಗಾರಿಕಾ ತರಬೇತಿ ಸಂಸ್ಥೆಯಿಂದ ಪ್ರಸಕ್ತ ಸಾಲಿನ ಮುಖ್ಯಮಂತ್ರಿ ಕೌಶಲ್ಯ ಕರ್ನಾಟಕ ಯೋಜನೆಯಡಿ 18 ವರ್ಷ ಮೇಲ್ಪಟ್ಟ ವಯಸ್ಸಿನ ನಿರುದ್ಯೋಗ ಯುವಕ, ಯುವತಿಯರಿಗೆ ವಿವಿಧ ವೃತ್ತಿಗಳ ಕುರಿತು ಅಲ್ಪಾವಧಿ ಕೌಶಲ್ಯ ತರಬೇತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತರು ಸೂಕ್ತ ದಾಖಲೆಯೊಂದಿಗೆ ಸರ್ಕಾರಿ ಮಾದರಿ ಕೈಗಾರಿಕಾ ತರಬೇತಿ ಸಂಸ್ಥೆ, ಹೊಸೂರು ರಸ್ತೆ, ಬೆಂಗಳೂರು – 29 ಇಲ್ಲಿ ಭೇಟಿ ನೀಡಿ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ವಿವರಕ್ಕಾಗಿ ಪ್ರಾಚಾರ್ಯರು ದೂರವಾಣಿ ಸಂಖ್ಯೆ : 080–26562307 ಗೆ ಸಂಪರ್ಕಿಸಬಹುದಾಗಿದೆ.

ಈ ಕೆಳಕಂಡ ವಿವಿಧ ಹುದ್ದೆಗಳಿಗೆ ಕೆಳಕಂಡ ತರಬೇತಿ ನಡೆಯಲಿದೆ

| Sl. No. | NSQF Aligned Job Role for Skilling | QP Ref. ID | Educational Qualification |
|---|---|---|---|
| 1. | Self-employed Tailor | AMH/A1947 | 8th Class |
| 2. | Specialized Sewing machine operator | AMH/Q2301 | 5th Class |
| 3. | CNC Operation Turning | CSC/Q0115 | 10th Class |
| 4. | Manual metal Arc Welding | CSC/Q0204 | 10th Class |
| 5. | Operator conventional Turning | CSC/Q0110 | 10th Class |
| 6. | Asst. Electrician | CON/Q0602 | 10th Class |
| 7. | Fitter Mechanical Assembly | CSC/Q0303 | 10th Class |
| 8. | Commercial Vehicle Driver | ASC/Q9703 | 8th Class |
| 9. | Field Enginer RACW | ELE/Q3005 | 8th Class |
| 10. | CNC Operator Machining Technician L3 | ASC/3501 | 10th Class |
| 11. | Field Technician Computing Peripherals | ELE/Q4601 | 12th Class |

| | | | |
|---|---|---|---|
| 12. | Plumber General | PSC/Q0104 | 5th Class |
| 13. | Automotive Service Technicvian | ASC/Q1411 | 10th Class |
| 14. | Fitter Fabrication | CSC/Q0303 | 10th Class |
| 15. | LMV Driver L-3 | ASC/Q9702 | 8th Class. |

## ಅಂಗನವಾಡಿ ಕಾರ್ಯಕರ್ತೆಯರ/ಸಹಾಯಕರ ಗೌರವ ಸೇವೆಯ ಹುದ್ದೆಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನ

**ಬೆಂಗಳೂರು ಜನವರಿ 14 (ಕರ್ನಾಟಕ ವಾರ್ತೆ)**

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ 4 ತಾಲ್ಲೂಕುಗಳ ಸಮಗ್ರ ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯಲ್ಲಿ ಅಂಗನವಾಡಿ ಕೇಂದ್ರಗಳಲ್ಲಿ ಖಾಲಿಯಿರುವ 11 ಅಂಗನವಾಡಿ ಕಾರ್ಯಕರ್ತೆಯರು ಮತ್ತು 42 ಅಂಗನವಾಡಿ ಸಹಾಯಕಿಯರ ಗೌರವ ಸೇವೆಯ ಹುದ್ದೆಗಳಿಗೆ ನೇಮಕ ಮಾಡಲು ಅರ್ಹ ಮಹಿಳಾ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿದೆ.

ಈ ಸಂಬಂಧ ಹೆಚ್ಚಿನ ವಿವರಗಳಿಗೆ ಸಂಬಂಧಪಟ್ಟ ಶಿಶು ಅಭಿವೃದ್ಧಿ ಯೋಜನಾಧಿಕಾರಿ, ಉಪ ನಿರ್ದೇಶಕರ ಕಚೇರಿ, ಕೊಠಡಿ ಸಂಖ್ಯೆ 206, 2ನೇ ಮಹಡಿ, ಜಿಲ್ಲಾಡಳಿತ ಭವನ ಬೀರಸಂದ್ರ, ದೇವನಹಳ್ಳಿ ತಾಲ್ಲೂಕು – 562 110, ಬೆಂಗಳೂರು ಗ್ರಾಮಾಂತರ ಜಿಲ್ಲಾ ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಿದೆ.

ಅರ್ಜಿ ಸಲ್ಲಿಸಲು ಜನವರಿ 31 ಕೊನೆಯ ದಿನಾಂಕವಾಗಿದ್ದು, ಈ ವೆಬ್‌ಸೈಟ್ www.anganwadirecruit.kar.nic.in ಅನ್ನು ವೀಕ್ಷಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

## ಅರ್ಹ ಅಭ್ಯರ್ಥಿಗಳ ಪಟ್ಟಿ ಪ್ರಕಟ

**ಬೆಂಗಳೂರು ಜನವರಿ 14 (ಕರ್ನಾಟಕ ವಾರ್ತೆ)**

ಕರ್ನಾಟಕ ಲೋಕಸೇವಾ ಆಯೋಘದ ಅಧಿಸೂಚನೆ ದಿನಾಂಕ: 25-11-2017 ರಲ್ಲಿ ಅಧಿಸೂಚಿಸಲಾಗಿರುವ ಅಲ್ಪಸಂಖ್ಯಾತರ ನಿರ್ದೇಶನಾಲಯದ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯದಲ್ಲಿ ನಿಲಯಪಾಲಕರು (ಮಹಿಳೆ) – 37 (32+5 ಹೈ.ಕ) ಹುದ್ದೆಗಳು ಮತ್ತು ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ವಿದ್ಯಾರ್ಥಿ ನಿಲಯದ ನಿಲಯಪಾಲಕರು – 40 (35+5 ಹೈ.ಕ.) ಹುದ್ದೆಗಳಿಗೆ 1:3 ಅನುಪಾತದಲ್ಲಿ ಮೂಲ ದಾಖಲೆಗಳ ಪರಿಶೀಲನೆಗೆ ಅರ್ಹರಾದ ಅಭ್ಯರ್ಥಿಗಳ ಅರ್ಹತಾ ಪಟ್ಟಿಯನ್ನು ದಿನಾಂಕ: 08-01-2020 ರಂದು ಆಯೋಗದ ವೆಬ್‌ಸೈಟ್ www.kpsc.kar.nic.in ನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಿದೆ.

ಆಯೋಗದ ದಿನಾಂಕ: 05-10-2016 ರ ಅಧಿಸೂಚನೆಯಲ್ಲಿ ಅಧಿಸೂಚಿಸಲಾಗಿರುವ ಅಲ್ಪಸಂಖ್ಯಾತರ ನಿರ್ದೇಶನಾಲಯದಲ್ಲಿನ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿನ ಉರ್ದು ಭಾಷಾ ಶಿಕ್ಷಕರು 41 (30 + 11 ಹೈ.ಕ.) ಮತ್ತು ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಪ್ರಥಮ ದರ್ಜೆ ಗಣಕ ಯಂತ್ರ ಸಹಾಯಕರು 20 (13 + 07 ಹೈ.ಕ.) ಹುದ್ದೆಗಳ ಮತ್ತು ಆಯೋಗದ ದಿನಾಂಕ: 03-03-2016 ರ ಅಧಿಸೂಚನೆಯಲ್ಲಿ ಅಧಿಸೂಚಿಸಲಾಗಿರುವ ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರಗಳ ಇಲಾಖೆಯಲ್ಲಿನ ಕಿರಿಯ ಲೆಕ್ಕ ಸಹಾಯಕರು 234 (151+83 ಹೈ.ಕ.) ಹುದ್ದೆಗಳ ಹೆಚ್ಚುವರಿ ಆಯ್ಕೆಪಟ್ಟಿಯನ್ನು ದಿನಾಂಕ: 08-01-2020 ರಂದು ಆಯೋಗದ ವೆಬ್‌ಸೈಟ್ www.kpsc.kar.nic.in ನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಿದೆ.

## ಎಸಿಬಿ ದಾಳಿ

**ಬೆಂಗಳೂರು, ಜನವರಿ 14 (ಕರ್ನಾಟಕ ವಾರ್ತೆ)**

**ಚಿಕ್ಕಬಳ್ಳಾಪುರ ಜಿಲ್ಲೆ, ಚಿಂತಾಮಣಿ ಟೌನ್‌ನ ನಿವಾಸಿಯೊಬ್ಬರು ತಮ್ಮ ತಂದೆಯ ಹೆಸರಿನಲ್ಲಿದ್ದ ಚಿಂತಾಮಣಿ ತಾಲ್ಲೂಕು, ಕಸಬಾ ಹೋಬಳಿ, ಕರಿಯಪ್ಪಲ್ಲಿ ಗ್ರಾಮದಲ್ಲಿ**

ವ್ಯವಸಾಯೇತರ ಉದ್ದೇಶಕ್ಕಾಗಿ 1-00 ಎಕರೆ ಜಮೀನು ಭೂಪರಿವರ್ತನೆ ಆಗಿದ್ದು, ಗ್ರಾಮ ಖಾತೆ ಸಂಖ್ಯೆ:572/292 ರಲ್ಲಿ ನೊಂದಣಿಯಾಗಿದ್ದು, ಅವರ ತಂದೆಯ ಮರಣದ ನಂತರ ತಮ್ಮ ತಾಯಿಯವರ ಹೆಸರಿನಲ್ಲಿ ಫವತಿ ಖಾತೆ ಮಾಡಿಕೊಡಲು ಕೋರಿ ಅರ್ಜಿಯನ್ನು ಕಾಗತಿ ಗ್ರಾಮ ಪಂಚಾಯ್ತಿಗೆ ಸಲ್ಲಿಸಿಕೊಂಡಿದ್ದು, ಇದುವರೆಗೆ ಫವತಿ ಖಾತೆ ಮಾಡಿಕೊಡದೆ ಇದ್ದು, ದೂರುದಾರರ ತಾಯಿಯು ಸಹ ತೀರಿಕೊಂಡಿರುತ್ತಾರೆ. ಪುನಃ ದೂರುದಾರರು ಹಾಗೂ ಅವರ ಅಣ್ಣ ತಮ್ಮಂದಿರ ಹೆಸರಿನಲ್ಲಿ ಫವತಿ ಖಾತೆ ಮಾಡಿಕೊಡಲು ಕೋರಿ ಮತ್ತೊಂದು ಅರ್ಜಿಯನ್ನು ಶ್ರೀ.ವಿ.ಶ್ರೀನಿವಾಸ್, ಗ್ರಾಮ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ, ಕಾಗತಿ ಗ್ರಾಮ ಪಂಚಾಯ್ತಿ ರವರಿಗೆ ಸಲ್ಲಿಸಿಕೊಂಡಿರುತ್ತಾರೆ. ಶ್ರೀನಿವಾಸ್ ರವರು ಫವತಿ ಖಾತೆ ಮಾಡಿಕೊಡಲು ರೂ.20,000/- ಹಣಕ್ಕಾಗಿ ಬೇಡಿಕೆ ಇಟ್ಟಿರುತ್ತಾರೆಂದು, ತಮಗೆ ಲಂಚದ ಹಣವನ್ನು ನೀಡಿ, ಕೆಲಸ ಮಾಡಿಸಿಕೊಳ್ಳಲು ಇಷ್ಟವಿರುವುದಿಲ್ಲವೆಂದು ನೀಡಿದ ದೂರಿನ ಮೇರೆಗೆ ಚಿಕ್ಕಬಳ್ಳಾಪುರ ಜಿಲ್ಲಾ ಭ್ರಷ್ಟಾಚಾರ ನಿಗ್ರಹ ದಳ ಠಾಣೆಯಲ್ಲಿ ಮೊ.ಸಂ:01/2020 ಕಲಂ 7(ಎ) ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ 1988 ರಡಿಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

ಈ ದೂರಿನನ್ವಯ ದಿನಾಂಕ:13/01/2020 ರಂದು ನಡೆಸಿದ ಟ್ರ್ಯಾಪ್ ಕಾರ್ಯಾಚರಣೆಯಲ್ಲಿ ಶ್ರೀ.ವಿ.ಶ್ರೀನಿವಾಸ, ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ, ಕಾಗತಿ ಗ್ರಾಮ ಪಂಚಾಯ್ತಿ, ಚಿಂತಾಮಣಿ ತಾಲ್ಲೂಕು ರವರು ದೂರುದಾರರಿಂದ ರೂ.20,000/- ಲಂಚದ ಹಣವನ್ನು ಪಡೆಯುವ ಸಂದರ್ಭದಲ್ಲಿ ಭ್ರಷ್ಟಾಚಾರ ನಿಗ್ರಹ ದಳ, ಚಿಕ್ಕಬಳ್ಳಾಪುರ ಜಿಲ್ಲಾ ಠಾಣೆಯ ಅಧಿಕಾರಿಗಳು ದಾಳಿ ನಡೆಸಿ, ಲಂಚದ ಹಣವನ್ನು ವಶಕ್ಕೆ ಪಡೆದುಕೊಂಡಿರುತ್ತಾರೆ. ಆರೋಪಿಯನ್ನು ದಸ್ತಗಿರಿ ಮಾಡಿ, ತನಿಖೆಯನ್ನು ಕೈಗೊಂಡಿರುತ್ತಾರೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## Observation of 31st Road Safety Week

**Bengaluru, January 14 (Karnataka Information)**

**31st Road Safety Week is being observed from 14.01.2020 to 21.01.2020 and in view of this Bengaluru Metropolitan Transport Corporation is also observing Road Safety Week with a theme "ಯುವಶಕ್ತಿಯಿಂದಲೇ ಬದಲಾವಣೆ"**

**"Bringing change through youth power" to create awareness about road safety and to avoid accidents.**

**Further, in co-ordination with the Traffic Police Department training programmes will be organized in all the depots and in training institution to create awareness amongst the drivers/conductors regarding traffic discipline, safety driving and Road safety week observation says official press release.**

## ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹ

**ಬೆಂಗಳೂರು, ಜನವರಿ 14 (ಕರ್ನಾಟಕ ವಾರ್ತೆ)**

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಅಪಘಾತಗಳನ್ನು ತಡೆಗಟ್ಟುವ ಸಲುವಾಗಿ ಹಾಗೂ ರಸ್ತೆ ಸುರಕ್ಷತಾ ಜಾಗೃತಿ ಹೆಚ್ಚಿಸಲು ಜನವರಿ 31ನೇ ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹವನ್ನು ಹಮ್ಮಿಕೊಳ್ಳಲಾಗಿದೆ.

ಪ್ರಸ್ತುತ ಸಾಲಿನ ರಸ್ತೆ ಸುರಕ್ಷತಾ ಸಪ್ತಾಹವನ್ನು "ಯುವಶಕ್ತಿಯಿಂದಲೇ ಬದಲಾವಣೆ" **"Bringing change through youth power"** ಎಂಬ ಘೋಷವಾಕ್ಯದೊಂದಿಗೆ ಸಪ್ತಾಹವನ್ನು ಆಚರಿಸಲಾಗುತ್ತಿದೆ.

ಈ ಹಿನ್ನೆಲೆಯಲ್ಲಿ ರಸ್ತೆ ಸುರಕ್ಷತಾ ಸಪ್ತಾಹವನ್ನು ಪರಿಣಾಮಕಾರಿಯಾಗಿ ಆಚರಿಸಿ, ಅಪಘಾತಗಳ ಸಂಖ್ಯೆ ಇಳಿಮುಖವಾಗುವಲ್ಲಿ ಸಂಸ್ಥೆಯು ಎಲ್ಲಾ ರೀತಿಯ ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತಿದೆ.

ಸಂಚಾರ ನಿಯಮಗಳ ಪಾಲನೆ, ರಕ್ಷಣಾತ್ಮಕ ಚಾಲನೆ ಹಾಗೂ ರಸ್ತೆ ಸುರಕ್ಷತಾ ಸಪ್ತಾಹದ ಆಚರಣೆಯ ಬಗ್ಗೆ ಸಂಸ್ಥೆಯ ಚಾಲನಾ ಸಿಬ್ಬಂದಿಗಳಲ್ಲಿ ಅರಿವು ಮೂಡಿಸಲು ಸಂಚಾರ ಪೊಲೀಸ್ ಇಲಾಖೆಯ ಸಹಯೋಗದೊಂದಿಗೆ ಸಂಸ್ಥೆಯ ಎಲ್ಲಾ ಘಟಕಗಳಲ್ಲಿ ಹಾಗೂ ಸಂಸ್ಥೆಯ ತರಬೇತಿ ಕೇಂದ್ರದಲ್ಲಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಬೆಂಗಳೂರು ಜಲಮಂಡಲಿ ಜನವರಿ 16 ರಂದು ನೀರಿನ ಅದಾಲತ್

**ಬೆಂಗಳೂರು, ಜನವರಿ 14 (ಕರ್ನಾಟಕ ವಾರ್ತೆ)**

ಬೆಂಗಳೂರು ಜಲಮಂಡಲಿಯು ದಿನಾಂಕ:16.01.2020 ಗುರುವಾರ ದಂದು **ಸಕಾನಿಅ(ದಕ್ಷಿಣ-3), (ಪಶ್ಚಿಮ-3), (ನೈರುತ್ಯ-3), (ಕೇಂದ್ರ-3),(ಉತ್ತರ-3),(ಈಶಾನ್ಯ-2) ಮತ್ತು (ಪೂರ್ವ-3)** ಉಪವಿಭಾಗಗಳಲ್ಲಿ

ನೀರಿನ ಬಿಲ್ಲು, ನೀರು ಮತ್ತು ಒಳಚರಂಡಿ ಸಂಪರ್ಕಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆಯಿಂದ ಗೃಹೇತ್ತರ ಬಳಕೆ ಪರಿವರ್ತನೆ ವಿಳಂಬ ಮತ್ತಿತರ ಕುಂದುಕೊರತೆಗಳಿಗೆ ಸಂಬಂಧಿಸಿದಂತೆ ನೀರಿನ ಅದಾಲತ್‌ಅನ್ನು ಬೆಳಗ್ಗೆ 9.30 ರಿಂದ 11:00 ಗಂಟೆಯವರೆಗೆ ನಡೆಸುತ್ತಿದ್ದು, ಅದಾಲತ್ ನಡೆಯುವ ಸ್ಥಳಗಳ ವಿವರ ಈ ಕೆಳಗಿನಂತಿದೆ.

| **ಉಪವಿಭಾಗದ ಹೆಸರು** | **ವಿಳಾಸ** | **ದೂರವಾಣಿ ಸಂಖ್ಯೆ** |
|---|---|---|
| ದಕ್ಷಿಣ-3 | #3, 9ನೇ ಮುಖ್ಯರಸ್ತೆ, ಬಿ.ಟಿ.ಎಂ. 2ನೇ ಹಂತ, ಬೆಂಗಳೂರು | 22945392 |
| ಪಶ್ಚಿಮ-3 | 5ನೇ ಹಂತ, 1ನೇ ಮುಖ್ಯರಸ್ತೆ, ಬಿ.ಇ.ಎಂ.ಎಲ್. ಲೇಔಟ್, ರಾಜರಾಜೇಶ್ವರಿ ನಗರ, ಬೆಂಗಳೂರು | 28611826 |
| ನೈರುತ್ಯ-3 | ಬಸವನಗುಡಿ, ಎಂ.ಎನ್.ಕೆ ಪಾರ್ಕ್, ಬೆಂಗಳೂರು | 22945155 |
| ಕೇಂದ್ರ-3 | ನೇತಾಜಿ ರಸ್ತೆ, ಫ್ರೇಜರ್ ಟೌನ್, ಬೆಂಗಳೂರು | 22945167 |
| ಉತ್ತರ-3 | 8ನೇ ಮುಖ್ಯರಸ್ತೆ, ಡಿ ಬ್ಲಾಕ್, ಸಹಕಾರ ನಗರ, ಬೆಂಗಳೂರು | 23621888 |
| ಈಶಾನ್ಯ-2 | #55, ಕುಮಾರ ಪಾರ್ಕ್ ಪಶ್ಚಿಮ, 8ನೇ & 9ನೇ ಅಡ್ಡ ರಸ್ತೆ, ಸೆಂಟ್ರಲ್ ಸ್ಟ್ರೀಟ್, ಬೆಂಗಳೂರು | 22945135 |
| ಪೂರ್ವ-3 | ಬಿ-31, ಐಟಿಐ ಕಾಲೋನಿ, ದೂರವಾಣಿ ನಗರ, ಬೆಂಗಳೂರು | 25663688 |

**ಮೇಲೆ ತಿಳಿಸಲಾದ ಉಪವಿಭಾಗಗಳ ವ್ಯಾಪ್ತಿಯಲ್ಲಿ ಬರುವ ಸೇವಾಠಾಣೆಗಳ ವಿವರ ಈ ಕೆಳಕಂಡಂತಿದೆ.**

ದಕ್ಷಿಣ-3 : ಬಿ.ಟಿ.ಎಂ.ಲೇಔಟ್-1&2

ಪಶ್ಚಿಮ -3 : ಕೆಂಗೇರಿ, ಐಡಿಯಲ್ ಹೋಂ, ಬಿ.ಇ.ಎಂ.ಎಲ್. ಲೇಔಟ್, ಆರ್.ಆರ್.ನಗರ.

ನೈರುತ್ಯ-3 : ಎಂ.ಎನ್.ಕೆ.ಪಾರ್ಕ್, ಮೌಂಟ್‌ಜಾಯ್, ನಾಗೇಂದ್ರಬ್ಲಾಕ್, ಗಿರಿನಗರ, ಕತ್ರಿಗುಪ್ಪೆ

ಕೇಂದ್ರ-3 : ಪ್ರೇಜರ್ ಟೌನ್, ಮಚಲಿಬೆಟ್ಟ, ಪಿಳ್ಳಣ್ಣಗಾರ್ಡನ್, ಡಿ.ಜೆ.ಹಳ್ಳಿ

ಉತ್ತರ-3 : ಸಹಕಾರನಗರ, ಜಕ್ಕೂರು, ವಿದ್ಯಾರಣ್ಯಪುರ

ಈಶಾನ್ಯ-2 : ಕೆಂಪೇಗೌಡ ಟವರ್, ಕುಮಾರಪಾರ್ಕ್, ಜಯಮಹಲ್.

ಪೂರ್ವ-3 :ಕೆ.ಆರ್.ಪುರಂ, ಬಸವನಪುರ, ದೇವಸಂದ್ರ, ಬಿ.ನಾರಾಯಣಪುರ, ರಾಮಮೂರ್ತಿ ನಗರ, ವಿಜಿನಾಪುರ, ಹೊರಮಾವು ಕುಂದು ಕೊರತೆಗಳಿಗೆ ಸಂಬಂಧಿಸಿದಂತೆ ಮಂಡಲಿಯ 24/7 ದೂರು ನಿರ್ವಹಣಾ ಕೇಂದ್ರದ ದೂರವಾಣಿ ಸಂಖ್ಯೆ:22238888, ಸಹಾಯವಾಣಿ 1916 ಹಾಗೂ ವಾಟ್ಸ್‌ಆಪ್

ಸಂಖ್ಯೆ:8762228888 ಗೆ ಸಂಪರ್ಕಿಸಬಹುದಾಗಿದೆ. ಸಾರ್ವಜನಿಕರು ಮೇಲಿನ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಈ ಅದಾಲತ್ ಸೌಲಭ್ಯ ಬಳಸಿಕೊಳ್ಳಲು ಪ್ರಕಟಣೆ ತಿಳಿಸಿದೆ.

## Water Adalath

## Bengaluru, January 14 (Karnataka Information)

BWSSB water Adalath is held on 16.01.2020 in AEE(South-3), AEE(West-3), AEE(South west-3), AEE(Central-3), AEE(North-3), AEE(North East-2) & AEE(East-3) sub divisions from 9:30.am to 11.00 am to settle the grievances concerned with the water billing, delay in providing water supply & sanitary connections, delay in converting from domestic connection to non domestic connection & other related issues. The details of the places where the Adalath is held is as follows.

| Sub-division | Address | Phone Number |
|---|---|---|
| South-3 | #3, 9th Main road, BTM, 2nd stage, Bengaluru | 22945392 |
| West–3 | 5th Stage, 1st Main, BEML Layout, RR Nagar, Bengaluru. | 28611826 |
| South West–3 | Basavanagudi, MNK Park, Bengaluru. | 22945155 |
| Central–3 | Nethaji Road, Frazer town, Bengaluru. | 22945167 |
| North–3 | 8th Main Road, 'D' Block, Sahakar Nagar, Bengaluru. | 23621888 |
| North East–2 | #55, Kumara park West, 8th & 9th cross, Central street, Bengaluru. | 22945135 |
| East–3 | B-31, ITI colony, Dooravani Nagar, Bengaluru. | 25663688 |

**The details of service stations coming under the subdivisions mentioned above are as follows:**

South -3 : BTM layout-1&2

West-3 : Kengeri, Ideal Homes, BEML Layout, RR Nagar

South west-3 : MNK park, Mountjoy, Nagendrablock, Girinagar, Kathirguppe

Central-3 : Frazer town, Machalibetta, Pillanna garden, D.J.Halli

North-3 : Sahakar Nagar, Jakkuru, Vidyaranyapura

North Eat-2 : Kempegowda tower, Kumarapark, Jayamahal

East-3 : K.R.Puram, Basavanapura, Devasandra, B.Narayanapura, Ramamurthynagar, Vijinapura, Horamavu.

For any problems regarding the water supply and all, publics can contact 24x7 call centre: 22238888 helpline number: 1916 & whats app no: 8762228888. Public can utilize this adalath facilities to solve the problems regarding water supply saya official press release.

## Dak Adalath

## Bengaluru, January 14 (Karnataka Information)

"Dak Adalat" for redressal of public grievances relating to Postal Services scheduled to be held on 27th January 2020 at 3 P.M. at Nelamangala Post Office, Near KSRTC Bus Stand, Nelamangala -562 123. Members of the public and esteemed customers of department of Posts in Bengaluru Region may address their grievances if any, to the Assistant Director (II) O/o The Postmaster General, Bengaluru Hq Region, Bengaluru -1 so as to reach this office latest by 22nd January 2020. Grievances can also be sent by e-mail to tech.karbg@indiapost.gov.in. It is requested that brief and specific details with relevant facts and figures may please be furnished along with complete contact details to facilitate speedy redressal says official press release.

## ಎಸಿಬಿ ದಾಳಿ

**ಬೆಂಗಳೂರು, ಜನವರಿ 14 (ಕರ್ನಾಟಕ ವಾರ್ತೆ)**

ಆಯುಕ್ತರು, ಬಿ.ಬಿ.ಎಂ.ಪಿ, ಬೆಂಗಳೂರು ರವರ ಅಧಿಸೂಚನೆ.ಸಂ:ಕಾಅ/ಬೃರ-ಪೂ/ಪಿಆರ್/51/09-10. ದಿನಾಂಕ:29.07.2009 ರಂತೆ ಟಿ.ಸಿ.ಪಾಳ್ಯ ಮುಖ್ಯ ರಸ್ತೆ ಮತ್ತು ಹೊರಮಾವು ಮುಖ್ಯ ರಸ್ತೆಗೆ ಹೊಂದಿಕೊಂಡಂತೆ ಇರುವ ಕೌದೇನಹಳ್ಳಿ ಗ್ರಾಮದ ಸರ್ವೆ ನಂ.132 ರಲ್ಲಿನ ಜಾಗವು ಸೇರಿದಂತೆ ಇನ್ನೂ ಕೆಲವು ಸ್ವತ್ತುಗಳನ್ನು ಭಟ್ಟರಹಳ್ಳಿ ರಸ್ತೆ ಟಿ.ಸಿ ಪಾಳ್ಯ ಜಂಕ್ಷನ್ ವರೆಗೆ ರಸ್ತೆ ಅಗಲೀಕರಣಕ್ಕೆ ಬಿ.ಬಿ.ಎಂ.ಪಿ ನೋಟಿಫೈ ಮಾಡಿರುತ್ತಾರೆ.

ಈ ಮೇಲ್ಕಂಡಂತೆ ನೋಟಿಫೈ ಮಾಡಿದ ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್ ಪುರಂ ಹೋಬಳಿ, ಕೌದೇನಹಳ್ಳಿ ಗ್ರಾಮದ ಸರ್ವೆ ನಂ.132 ರಲ್ಲಿ ಈ ಹಿಂದೆ ಸುಮಾರು 1989 ರಲ್ಲಿ ಬಡಾವಣೆ ನಿರ್ಮಿಸಿ, ಅಲ್ಲಿನ ಸೈಟ್‌ಗಳನ್ನು ಮಾರಾಟ ಮಾಡಿದ ಈ ಹಿಂದಿನ ಭೂ ಮಾಲೀಕರಾದ ಮುನಿರಾಜಪ್ಪ ಬಿನ್ ಲೇಟ್ ರೇವಣ್ಣ ಹಾಗೂ ಇತರರಿಂದ ಜಿ.ಪಿ.ಎ ಪಡೆದ ಆರೋಪಿತ ಟಿ.ಡಿ.ಆರ್ ಬ್ರೋಕರ್‌ಗಳಾದ ಬಿ.ಎಸ್ ಸುರೇಂದ್ರನಾಥ್, ಕೆ ಗೌತಮ್, ಸುರೇಶ.ಕೆ ಹಾಗೂ ಮೆ॥ ವಾಲ್ಮಾರ್ಕ್ ರಿಯಾಲ್ಟಿ ಹೋಲ್ಡಿಂಗ್ ಪ್ರೈ ಲಿ ಕಂಪನಿಯವರು ಬಿಬಿಎಂಪಿ ಅಧಿಕಾರಿಗಳೊಂದಿಗೆ ಅಕ್ರಮ ಒಡಂಬಡಿಕೆಯನ್ನು ಮಾಡಿಕೊಂಡು ಕೌದೇನಹಳ್ಳಿ ಸರ್ವೆ ನಂ.132 ರಲ್ಲಿ ಹಲವಾರು ಸಾರ್ವಜನಿಕರು ಸೈಟ್‌ಗಳನ್ನು ಖರೀದಿಸಿ, ಅಲ್ಲಿ ಮನೆಗಳನ್ನು ಕಟ್ಟಿಕೊಂಡು ಬಿಬಿಎಂಪಿಯಲ್ಲಿ ಖಾತೆಮಾಡಿಸಿ, ಕಂದಾಯವನ್ನು ಪಾವತಿಸುತ್ತಿರುವುದನ್ನು ಮರೆಮಾಚಿ, ಬಿಬಿಎಂಪಿ ಸುತ್ತೋಲೆಗಳಿಗೆ ವ್ಯತ್ತಿರಿಕ್ತವಾಗಿ ಕಟ್ಟಡಗಳ ಮೌಲ್ಯ ಮಾಪನ ವರದಿಗಳನ್ನು ತಯಾರಿಸಿ, ರಸ್ತೆ ಅಗಲೀಕರಣಕ್ಕೆ ಒಳಪಡದ ಹಲವು ಕಟ್ಟಡಗಳನ್ನು ರಸ್ತೆ ಅಗಲೀಕರಣಕ್ಕೆ ಒಳಪಡುವುದಾಗಿ ಹಾಗೂ ನೆಲ+1 ಮಹಡಿ ಇರುವ ಕಟ್ಟಡಗಳನ್ನು ನೆಲ+3 ಮಹಡಿಯ ಕಟ್ಟಡಗಳೆಂದು ಸುಳ್ಳು ವರದಿಗಳನ್ನು ತಯಾರಿಸಿ, ಈ ಕಟ್ಟಡಗಳಿಗೆ 5,95,86,925/- ರೂಪಾಯಿಗಳ ಬೆಲೆ ನಿಗಧಿಪಡಸಿ, ಕಾನೂನು ಬಾಹಿರವಾಗಿ ಡಿ.ಅರ್.ಸಿ ನಂ.002924 ಮತ್ತು 002958 ಗಳನ್ನು 2014ನೇ ಸಾಲಿನಲ್ಲಿ ಬಿಬಿಎಂಪಿಯಿಂದ ಪಡೆದು ಅವುಗಳನ್ನು 8 ರಿಯಲ್‌ಎಸ್ಟೇಟ್ ಕಂಪನಿಗಳಿಗೆ 27 ಕೋಟಿಗೂ ಅಧಿಕ ಬೆಲೆಗೆ ಮಾರಾಟ ಮಾಡಿಕೊಂಡು ಬಿಬಿಎಂಪಿಗೆ ವಂಚಿಸಿರುತ್ತಾರೆ ಹಾಗೂ ಈ ರೀತಿ ಟಿ.ಡಿ.ಆರ್ ಪಡೆದಿರುವ ಜಾಗವನ್ನು ಬಿಬಿಎಂಪಿ ರವರು ಸುಮಾರು 06 ವರ್ಷಗಳು ಕಳೆದರೂ ಸ್ವಾಧೀನ ಪಡೆದು ರಸ್ತೆ ಅಗಲೀಕರಣ ಮಾಡಿರುವುದಿಲ್ಲ, ಉದ್ದೇಶಿತ ರಸ್ತೆಯು ಅಗಲೀಕರಣವಾಗದೇ ಯಥಾಸ್ಥಿತಿ ಮುಂದುವರೆದಿರುತ್ತದೆ.

ಟಿಡಿಆರ್‌ಗೆ ಅರ್ಜಿ ಹಾಕುವ ಹಂತದಿಂದಲೇ ಟಿಡಿಆರ್ ಬ್ರೋಕರ್‌ಗಳು ಹಾಗೂ ವಾಲ್‌ಮಾರ್ಕ್ ಕಂಪನಿಯವರು, ಟಿಡಿಆರ್ ಪಡೆಯುವ ಸಲುವಾಗಿ ಹಳೇಯ ಜಮೀನು ಮಾಲೀಕರಿಂದ ನೊಂದಾಯಿತ ಜಿಪಿಎ ಹಾಗೂ ಸೇಲ್ ಅಗ್ರಿಮೆಂಟ್ ಪಡೆದುಕೊಂಡು ನಡೆದ ಎಲ್ಲಾ ಅಕ್ರಮಗಳಲ್ಲಿ ಭಾಗಿಯಾಗಿರುವುದು ತನಿಖೆಯಿಂದ ದೃಡಪಟ್ಟಿರುತ್ತದೆ.

ಹಾಗೂ ಈ ಪ್ರಕರಣದಲ್ಲಿ ಟಿ.ಡಿ.ಆರ್ ವಿತರಣೆ ಕಾಲದಲ್ಲಿ ಬಿಬಿಎಂಪಿ ಅಧಿಕಾರಿಗಳು ತಯಾರಿಸಿ ಸಹಿ ಮಾಡಿದ್ದ ಕೆಲವು ದಾಖಲೆಗಳ ಪ್ರತಿಗಳು ಆರೋಪಿತ ಟಿ.ಡಿ.ಆರ್ ಬ್ರೋಕರ್ ಕಂಪನಿಯಾದ ಮೆ/ಸ ವಾಲ್ಮಾರ್ಕ್ ರಿಯಾಲ್ಟಿ ಹೋಲ್ಡಿಂಗ್ಸ್ ಪ್ರೈ ಲಿ ಕಂಪನಿಯ ಕಛೇರಿಯಲ್ಲಿ ಅಮಾನತ್ತುಪಡಿಸಿಕೊಂಡಿರುತ್ತದೆ ಹಾಗೂ ಆರೋಪಿತ ಬಿಬಿಎಂಪಿ ಅಧಿಕಾರಿಗಳಾದ ಕೃಷ್ಣಲಾಲ್, ಸಹಾಯಕ ಅಭಿಯಂತರರು, ಟಿ.ಡಿ.ಆರ್ ವಿಭಾಗ, ಮಹದೇವಪುರ ವಲಯ, ಬಿಬಿಎಂಪಿ, ಬೆಂಗಳೂರು, ಕೆ.ಎನ್ ರಮೇಶ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಈಶ್ವರಪ್ರಸನ್ನಯ್ಯ, ಸಹಾಯಕ ಕಂದಾಯ ಅಧಿಕಾರಿ, ಜಗನ್ನಾಥ ರೆಡ್ಡಿ, ರಾಜಸ್ವ ನಿರೀಕ್ಷರು, ಚಂದ್ರಶೇಖರ್, ಗ್ರಾಮ ಲೆಕ್ಕಿಗ ಹಾಗೂ ಇತರರ ಬಿಬಿಎಂಪಿ ಅಧಿಕಾರಿಗಳು ಆರೋಪಿತ ಟಿ.ಡಿ.ಆರ್ ಬ್ರೋಕರ್‌ಗಳೊಂದಿಗೆ ಅಕ್ರಮ ಒಡಂಬಡಿಕೆಯನ್ನು ಮಾಡಿಕೊಂಡು ಸುಳ್ಳು ದಾಖಲೆ ಹಾಗೂ ಸುಳ್ಳು ವರದಿಗಳನ್ನು ತಯಾರಿಸಿ, ಹಲವು ಆಸ್ತಿತ್ವದಲ್ಲಿಯೇ ಇಲ್ಲದೇ ಕಟ್ಟಡಗಳ ಹೆಸರಿನಲ್ಲಿ ಹಾಗೂ ರಸ್ತೆ ಅಗಲೀಕರಣಕ್ಕೆ ಒಳಪಡದ ಕಟ್ಟಡಗಳ ಹಸರಿನಲ್ಲಿ ಮತ್ತು ಒಂದು ಮಹಡಿ ಕಟ್ಟಡಗಳನ್ನು ಮೂರು ಮಹಡಿಯ ಕಟ್ಟಡಗಳೆಂದು ಇವುಗಳಿಗೆ 5 ಕೋಟಿಗೂ ಅಧಿಕ ಮೌಲ್ಯವನ್ನು ಕಾನೂನು ಬಾಹಿರವಾಗಿ ನಿಗಧಿಪಡಿಸಿ ಅಕ್ರಮವಾಗಿ ಒಟ್ಟು 5,64,592 ಚದರ ಅಡಿ ವಿಸ್ತೀರ್ಣದ ಟಿ.ಡಿ.ಆರ್ ಅನ್ನು ವಿತರಣೆ ಮಾಡಿರುವುದು ಪ್ರಸ್ತುತ ತನಿಖೆಯಿಂದ ದೃಢಪಟ್ಟಿರುತ್ತದೆ.

ಆದ್ದರಿಂದ ಆರೋಪಿತ ಸರ್ಕಾರಿ ಅಧಿಕಾರಿಗಳನ್ನು ಘನ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಲು ಅವಶ್ಯಕವಾದ ಅಭಿಯೋಜನಾ ಮಂಜೂರಾತಿ ಆದೇಶವನ್ನು ಕೋರಿ 1) ಕೃಷ್ಣಲಾಲ್, ಸಹಾಯಕ ಅಭಿಯಂತರರು, ಟಿ.ಡಿ.ಆರ್ ವಿಭಾಗ, ಮಹದೇವಪುರ ವಲಯ, ಬಿಬಿಎಂಪಿ, ಬೆಂಗಳೂರು, ಮತ್ತು 2) ಈಶ್ವರಪ್ರಸನ್ನಯ್ಯ, ಸಹಾಯಕ ಕಂದಾಯ ಅಧಿಕಾರಿ ಇವರಿಗೆ 'ಆಯುಕ್ತರು' ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, 3) ಕೆ.ಎನ್ ರಮೇಶ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಇವರಿಗೆ 'ಸರ್ಕಾರದ ಪ್ರಧಾನ

ಕಾರ್ಯದರ್ಶಿ', ಲೋಕೋಪಯೋಗಿ ಇಲಾಖೆ, ವಿಕಾಸ ಸೌಧ ಬೆಂಗಳೂರು 4) ಜಗನ್ನಾಥ ರೆಡ್ಡಿ, ರಾಜಸ್ವ ನಿರೀಕ್ಷರು ಇವರಿಗೆ ಪ್ರಾದೇಶಿಕ ಆಯುಕ್ತರು, ಬೆಂಗಳೂರು ನಗರ ವಿಭಾಗ ಬೆಂಗಳೂರು ಮತ್ತು 5) ಚಂದ್ರಶೇಖರ್, ಗ್ರಾಮ ಲೆಕ್ಕಾಧಿಕಾರಿ ಇವರಿಗೆ 'ಜಿಲ್ಲಾಧಿಕಾರಿಗಳು', ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಇವರಿಗೆ ದಾಖಲಾತಿಗಳ ಸಮೇತ ದಿನಾಂಕ:30.12.2019 ರಂದು ತನಿಖಾ ವರದಿಯನ್ನು ಕಳುಹಿಸಿರುತ್ತದೆ. ಅಭಿಯೋಜನಾ ಮಂಜೂರಾತಿ ಆದೇಶವನ್ನು ಪಡೆದ ನಂತರ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲಾಗುವುದು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಮಕರ ಸಂಕ್ರಾಂತಿ ಶುಭಾಶಯ

**ಬೆಂಗಳೂರು, ಜನವರಿ 14 (ಕರ್ನಾಟಕ ವಾರ್ತೆ)**

ಸಂಕ್ರಾಂತಿ ಹಬ್ಬದ ಸಂದರ್ಭದಲ್ಲಿ ವಿಧಾನ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ನಾಡಿನ ಎಲ್ಲಾ ರೈತಬಾಂದವರಿಗೆ ಮತ್ತು ಸಾರ್ವಜನಿಕರಿಗೆ ಉತ್ಸಾಹ, ಸಂತೋಷ, ಆನಂದ ಹಾಗೂ ಭರವಸೆಯ ಕಿರಣಗಳೊಂದಿಗೆ ಸರ್ವರ ಬಾಳು ಬೆಳಗಲೆಂದು ಶುಭಾಶಯವನ್ನು ಕೋರಿದ್ದಾರೆ.

### ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿಗೆ ಜನವರಿ 17 ರಂದು ಸಂಪುಟ ಉಪ ಸಮಿತಿ ಸಭೆ

**ಬೆಂಗಳೂರು, ಜನವರಿ 14 (ಕರ್ನಾಟಕ ವಾರ್ತೆ)**

**ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಹಿಂಬಾಕಿ (ಬ್ಯಾಕ್‌ಲಾಗ್) ಹುದ್ದೆಗಳನ್ನು ಭರ್ತಿ ಮಾಡುವ ಉಸ್ತುವಾರಿಗಾಗಿ ರಚಿಸಲಾಗಿರುವ ಸಚಿವ ಸಂಪುಟ ಉಪ ಸಮಿತಿ ಸಭೆಯನ್ನು ಉಪ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಹಾಗೂ ಸಮಾಜ ಕಲ್ಯಾಣ ಸಚಿವ ಗೋವಿಂದ ಎಂ. ಕಾರಜೋಳ ಅವರ ಅಧ್ಯಕ್ಷತೆಯಲ್ಲಿ ಜನವರಿ 17 ರಂದು ಬೆಳಿಗ್ಗೆ 10–30 ಗಂಟೆಗೆ ವಿಧಾನ ಸೌಧದ ಸಮಿತಿ ಕೊಠಡಿಯಲ್ಲಿ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.**